ಜಾನುವಾರು ಹತ್ಯೆ ನಿಷೇಧದ ಅಧಿಸೂಚನೆ ಗೋವಾಗೆ ಅನ್ವಯಿಸಲ್ಲ: ಪರಿಕ್ಕರ್

ಪಣಜಿ: ಹತ್ಯೆಯ ಉದ್ದೇಶದಿಂದಾಗಿ ಮಾರುಕಟ್ಟೆಯಲ್ಲಿ ಜಾನುವಾರುಗಳನ್ನು ಮಾರಾಟ ಮಾಡುವುದರ ಮೇಲೆ ನಿಷೇಧ ಹೇರಿರುವ ಕೇಂದ್ರ ಸರ್ಕಾರದ ಅಧಿಸೂಚನೆ ಗೋವಾಗೆ ಅನ್ವಯಿಸಲ್ಲ ಎಂದು ಮುಖ್ಯಮಂತ್ರಿ ಮನೋಹರ್ ಪರಿಕ್ಕರ್ ಹೇಳಿದ್ದಾರೆ. ಗೋವಾ ರಾಜ್ಯದಲ್ಲಿ ಜಾನುವಾರುಗಳ ಮಾರುಕಟ್ಟೆಗಳೇ ಇಲ್ಲ. ಹೀಗಾಗಿ ಕೇಂದ್ರ ಸರ್ಕಾರದ ಹತ್ಯೆಯ ಉದ್ದೇಶದಿಂದಾಗಿ ಮಾರುಕಟ್ಟೆಯಲ್ಲಿ ಜಾನುವಾರು ಮಾರಾಟ ನಿಷೇಧದ ಅಧಿಸೂಚನೆ ಗೋವಾಗೆ ಅನ್ವಯಿಸಲ್ಲ ಎಂದು ಪರಿಕ್ಕರ್ ತಿಳಿಸಿದ್ದಾರೆ. ಇನ್ನು, ಈಗಾಗಲೇ ಗೋವಾ ಸರ್ಕಾರ ಜಾನುವಾರು ಹತ್ಯೆ ನಿಷೇಧದ ವಿರುದ್ಧ ಆಕ್ಷೇಪ ವ್ಯಕ್ತಪಡಿಸಿ, ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದೆ. ಇತ್ತೀಚೆಗೆ ಜಾನುವಾರು ಹತ್ಯೆ ನಿಷೇಧದ ಅಧಿಸೂಚನೆ ವಿಚಾರವಾಗಿ ಸುಪ್ರೀಂಕೋರ್ಟ್ ಕೇಂದ್ರಕ್ಕೆ ನೋಟಿಸ್ ಜಾರಿಮಾಡಿದ್ದು, ನೋಟಿಸ್‌ಗೆ ಉತ್ತರಿಸಲು 2 ವಾರ ಗಡುವು ನೀಡಿದೆ ಎನ್ನಲಾಗಿದೆ.

ಹವಾಮಾನ

ಭಾನುವಾರ ಗರಿಷ್ಠ ಉಷ್ಣಾಂಶ 26.2°, ಕನಿಷ್ಠ 24.2° ತೇವಾಂಶ:3.0°

ಬಿಹಾರ ಮಂತ್ರಿ ತೇಜ್‌ಪ್ರತಾಪ್ ಒಡೆತನದ ಪೆಟ್ರೋಲ್ ಪಂಪ ಪರವಾನಗಿ ರದ್ದು

ಪಾಟ್ನಾ: ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್), ಬಿಹಾರ ಆರೋಗ್ಯ ಸಚಿವ ತೇಜ್ ಪ್ರತಾಪ್ ಯಾದವ ಒಡೆತನದ ಪೆಟ್ರೋಲ್ ಪಂಪ್ ಪರವಾನಗಿಯನ್ನು ರದ್ದು ಮಾಡಿದೆ. ತೇಜ್ ಪ್ರತಾಪ್ ಕಾನೂನುಬಾಹಿರವಾಗಿ ಪರವಾನಗಿ ತೆಗೆದುಕೊಂಡಿದ್ದಾರೆ ಎಂದು ಆರೋಪಿಸಲಾಗಿತ್ತು. ರಾಷ್ಟ್ರೀಯ ಜನತಾ ದಳ ಮುಖ್ಯಸ್ಥ ಲಾಲು ಪ್ರಸಾದ್ ಯಾದವ್ ಅವರ ಹಿರಿಯ ಪುತ್ರ ತೇಜ್ ಪ್ರತಾಪ್ ಯಾದವ. ಅನಿಸಾಬಾದ್ ಬೈಪಾಸ್‌ಬಳಿ ಇರುವ ಪೆಟ್ರೋಲ್ ಬಂಕ್‌ನ ಪ್ರದೇಶ ತೇಜ್ ಪ್ರತಾಪ್‌ಗೆ ಸೇರಿದ್ದಲ್ಲ ಎಂದು ಬಿಜೆಪಿ ಮುಖಂಡ ಸುಶೀಲ್‌ಕುಮಾರ್ ಮೋದಿ ಮಾಡಿದ್ದ ಆರೋಪಕ್ಕೆ ಉತ್ತರಿಸಲು ಮೇ. 29ರಂದು ಬಿಪಿಸಿಎಲ್, ತೇಜ್ ಪ್ರತಾಪ್ ಅವರಿಗೆ ನೋಟಿಸ್‌ನೀಡಿತ್ತು.

ಗುರುವಿನ ಸ್ಥಾನದ ಗೌರವ ಉಳಿಸಲು ಉಪನ್ಯಾಸಕರಿಗೆ ಸಲಹೆ

ಉಪನ್ಯಾಸಕರಿಗೆ ತರಬೇತಿ ಕಾರ್ಯಾಗಾರ



ಹಾಸನ: ದೇಶದ ಭವಿಷ್ಯ ಸ್ವಾಭಿಮಾನಿ ಯುವಜನರನ್ನು ಅವಲಂಬಿಸಿದೆ. ಅಂತಹ ಯುವಜನರ ಪಡೆಯನ್ನು ನಿರ್ಮಿಸುವ ಮೂಲಕ ಬಲಿಷ್ಠ ರಾಷ್ಟ್ರ ನಿರ್ಮಾಣ ಮಾಡಬೇಕಾದ ಹೊಣೆಗಾರಿಕೆ ಶಿಕ್ಷಕರು ಮತ್ತು ಉಪನ್ಯಾಸಕರದ್ದಾಗಿದೆ ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಹಾಸನ ಶಾಖಾ ಮಠದ ಶಂಭುನಾಥ ಸ್ವಾಮೀಜಿ ಹೇಳಿದರು.

ನಗರದ ಬಿಜಿಎಸ್ ವಿಜ್ಞಾನ ಮತ್ತು ವಾಣಿಜ್ಯ ಪದವಿಪೂರ್ವ ಕಾಲೇಜಿನಲ್ಲಿ ಜಿಲ್ಲೆಯ ಎಲ್ಲಾ ಬಿಜಿಎಸ್ ಪದವಿ ಪೂರ್ವ ಕಾಲೇಜು ಮತ್ತು ಬಿಎಡ್ ಕಾಲೇಜುಗಳ ಉಪನ್ಯಾಸಕರು ಮತ್ತು ಪ್ರಾಂಶುಪಾಲರಿಗೆ ಏರ್ಪಡಿಸಿದ್ದ ಒಂದು ದಿನದ ತರಬೇತಿ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.

ದೇಶದ ಹಲವಾರು ರಾಷ್ಟ್ರಗಳಲ್ಲಿ ಆದರ್ಶ ಶಿಕ್ಷಕರು ನವನಿರ್ಮಾಣ ಕ್ರಾಂತಿಗೆ ಮುನ್ನುಡಿ ಹಾಡಿದ ಉದಾಹರಣೆಗಳು ಇತಿಹಾಸದಲ್ಲಿ ಸಿಗುತ್ತವೆ. ಮಹಾನ್ ಗುರುವಾಗಿದ್ದ ಚಾಣಕ್ಯ ಹೊಸ ಸಾಮ್ರಾಜ್ಯ ಸ್ಥಾಪನೆಗೆ ನಾಂದಿ ಹಾಡಿದ ಭವ್ಯ ಇತಿಹಾಸ ಭಾರತದ್ದಾಗಿದೆ. ತಾಯಿ ಮತ್ತು ತಂದೆಯ ನಂತರದ ಸ್ಥಾನವನ್ನು ನಮ್ಮಲ್ಲಿ ಗುರುವಿಗೆ ನೀಡಲಾಗಿದೆ. ಆ ಸ್ಥಾನದ ಘನತೆ, ಗೌರವ ಉಳಿಸುವ ಕೆಲಸವನ್ನು ಶಿಕ್ಷಕರು ಮಾಡಬೇಕು ಎಂದು ಕಿವಿಮಾತು ಹೇಳಿದರು.

ಬದುಕುವ ಕಲೆಯನ್ನು ಕಲಿಸುವುದೇ ನಿಜವಾದ ಶಿಕ್ಷಣ. ಕಲಿಯುವುದು ಮತ್ತು ಕಲಿಸುವುದು ನಿರಂತರ ಪ್ರಕ್ರಿಯೆ. ಗುರುವಾದವನು ನಿರಂತರ ವಿದ್ಯಾರ್ಥಿಯಾಗಿರಬೇಕು. ಇಂದಿನ ಸ್ಪರ್ಧಾತ್ಮಕ ಯುಗಕ್ಕೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲು ಉಪನ್ಯಾಸಕರು ಕಾಲಕಾಲಕ್ಕೆ ತಮ್ಮ ಜ್ಞಾನವನ್ನು ಹೊಳಪು ಗೊಳಿಸಿಕೊಳ್ಳುವ ಕೆಲಸ ಮಾಡಿಕೊಳ್ಳಬೇಕು. ಅದಕ್ಕೆ ಇಂತಹ ಕಾರ್ಯಾಗಾರಗಳ ಪ್ರಯೋಜನ ಪಡೆಯಬೇಕು ಎಂದರು.

ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಬಿ.ಸಿ. ಜಯದೇವಯ್ಯ ಅವರು, ಪ್ರತಿ ವಿದ್ಯಾರ್ಥಿಯೂ ಪರೀಕ್ಷೆಯಲ್ಲಿ ಉತ್ತೀರ್ಣವಾಗುವಂತೆ ಬೋಧಿಸುವ ಜವಾಬ್ದಾರಿ ಉಪನ್ಯಾಸಕರದು. ಅನುತ್ತೀರ್ಣರಾದ ಬಹುತೇಕ ವಿದ್ಯಾರ್ಥಿಗಳು ಶಿಕ್ಷಣವನ್ನು ಅರ್ಧಕ್ಕೇ ನಿಲ್ಲಿಸುವುದರಿಂದ ಅಮೂಲ್ಯ ಯುವಸಂಪತ್ತು ನಷ್ಟವಾಗಿ ದೇಶದ ಪ್ರಗತಿ ಕುಂಠಿತವಾಗುತ್ತದೆ. ಹಾಗಾಗಿ ಪರೋಕ್ಷವಾಗಿ ದೇಶದ ಪ್ರಗತಿಗೂ ಶಿಕ್ಷಕ ವೃತ್ತಿಗೂ ಮಹತ್ವದ ಸಂಬಂಧವಿದೆ ಎಂಬ ಅಂಶವನ್ನು ಮನದಲ್ಲಿಟ್ಟುಕೊಂಡು ಉಪನ್ಯಾಸಕರು ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳಿಗೆ ಲೌಕಿಕ ಶಿಕ್ಷಣದೊಂದಿಗೆ ಆಧ್ಯಾತ್ಮಿಕ ಮತ್ತು ನೈತಿಕ ಶಿಕ್ಷಣ ನೀಡುವ ಅಗತ್ಯವಿದೆ. ಇದರಿಂದ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣಗಳನ್ನು ಕಡಿಮೆ ಮಾಡಬಹುದು. ಬಿಜಿಎಸ್ ಶಿಕ್ಷಣ ಸಂಸ್ಥೆಗಳಲ್ಲಿ ಧಾರ್ಮಿಕ ವಾತಾವರಣವಿರುವುದರಿಂದ ಅದರ ಸಂಪೂರ್ಣ ಪ್ರಯೋಜನ ವಿದ್ಯಾರ್ಥಿಗಳಿಗೆ ಮತ್ತು ಆ ಮೂಲಕ ಸಮಾಜಕ್ಕೆ ದೊರೆಯುವಂತೆ ಮಾಡಬೇಕು ಎಂದು ಸಲಹೆ ನೀಡಿದರು.

ಎವಿಕೆ ಮಹಿಳಾ ಕಾಲೇಜು ಪ್ರಾಧ್ಯಾಪಕ ಡಾ. ಮಲ್ಲೇಶ ಗೌಡ, ಆದಿಚುಂಚನಗಿರಿ ಮಹಾಸಂಸ್ಥಾನ ಹಾಸನ ಶಾಖಾ ಮಠದ ವ್ಯವಸ್ಥಾಪಕ ಹೆಚ್.ಕೆ. ಚಂದ್ರಶೇಖರ್, ಬಿಜಿಎಸ್ ವಿಜ್ಞಾನ ಮತ್ತು ವಾಣಿಜ್ಯ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಜಿ. ಚಂದ್ರಶೇಖರ್ ಮತ್ತು ಆದಿ ಚುಂಚನಗಿರಿ ಆಂಗ್ಲಮಾಧ್ಯಮಶಾಲೆ ಪ್ರಾಂಶುಪಾಲ ವಿಕ್ರಮಂ ದೇವ್ ಪ್ರಭು ಉಪಸ್ಥಿತರಿದ್ದರು. ಉಪನ್ಯಾಸಕರಾದ ರೇಷ್ಮಾ ಕಾರ್ಯಕ್ರಮ ನಿರೂಪಿಸಿದರು, ಕೃಷ್ಣ ಪ್ರಾರ್ಥನೆ ಮಾಡಿದರು ಮತ್ತು ಅನಿಷಾ ವಂದಿಸಿದರು.

ಯಾದಾಪುರ ವ್ಯವಸಾಯ ಸಹಕಾರ ಸಂಘಕ್ಕೆ ಅಧ್ಯಕ್ಷರಾಗಿ ರವಿಕುಮಾರ್ ಆಯ್ಕೆ

ಅರಸೀಕೆರೆ: ತಾಲ್ಲೂಕಿನ ಯಾದಾಪುರ ವ್ಯವಸಾಯ ಸಹಕಾರ ಸಂಘ ನಿಯಮಿತ ಇಲ್ಲಿಗೆ ನೂತನ ಅಧ್ಯಕ್ಷರಾಗಿ ಸಿದ್ದರಹಟ್ಟಿ ಗ್ರಾಮದ ರವಿಕುಮಾರ್ ಆಯ್ಕೆಯಾಗಿದ್ದಾರೆ. ಗೀಜಿಹಳ್ಳಿ ಕರಿಸಿದ್ದಪ್ಪ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಇಂದು ಚುನಾವಣೆ ನಿಗದಿಯಾಗಿದ್ದು, ರವಿಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಶಂಕರಲಿಂಗೇಗೌಡ, ಸಂಘದ ಮಾಜಿ ಅಧ್ಯಕ್ಷ ಎಂ.ಟಿ ಅಶೋಕ, ಕರಿಸಿದ್ದಪ್ಪ, ವೀರಭದ್ರಪ್ಪ ವೈ.ಎಸ್, ಮುರುಂಡಿ ಗ್ರಾ.ಪಂ ಅಧ್ಯಕ್ಷ ಜಗದೀಶ್ ಎಂ. ಎಂ, ಗ್ರಾ.ಪಂ. ಸದಸ್ಯ ನಾರಾಯಣಮೂರ್ತಿ, ಜೆಡಿಎಸ್ ಮುಖಂಡ ಜವನಪ್ಪ ವೆಂಕಟೇಶ್, ರೇಣುಕಯ್ಯ, ಚಿತ್ತಯ್ಯ, ಗೀಜಿಹಳ್ಳಿ ಸಿದ್ದೇಶ, ವೈ.ಜಿ. ಸಿದ್ದೇಶ್, ಲಕ್ಷ್ಮಣ ಮತ್ತಿತರರು ಉಪಸ್ಥಿತರಿದ್ದರು.

ವಿದ್ಯುತ್ ವ್ಯತ್ಯಯ

ಹಾಸನ: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಹಾಸನ ವಿಭಾಗ ವ್ಯಾಪ್ತಿಯಲ್ಲಿನ ಈ ಕೆಳಕಂಡ ಫೀಡರ್‌ಗಳಲ್ಲಿ ಅವುಗಳ ಮುಂದೆ ತಿಳಿಸಲಾದ ದಿನಾಂಕಗಳಂದು ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ ಬೆಳಿಗ್ಗೆ 10 ಗಂಟೆಯಿಂದ ಸಂಜೆ 4.30 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ನಿಗಮದೊಂದಿಗೆ ಸಹಕರಿಸಿಬೇಕು ಎಂದು ಈ ಮೂಲಕ ಕೋರಲಾಗಿದೆ.

ಕೆ.ಐಎಡಿಬಿ ಉಪವಿಭಾಗದ ದೊಡ್ಡಗದ್ದವಳ್ಳಿ, ಶಂಖ ಮತ್ತು ಶೆಟ್ಟಿಹಳ್ಳಿ ಶಂಕರನ ಹಳ್ಳಿ ಮತ್ತು ಛತ್ರುನಹಳ್ಳಿ ಫೀಡರ್‌ನ ಗ್ರಾಮಗಳು ಮತ್ತು ನಗರ ಉಪ ವಿಭಾಗದ ಹಾಸನಾಂಬ ಫೀಡರ್‌ನ ಸುತ್ತಮುತ್ತಲಿನ ಗ್ರಾಮಗಳಲ್ಲಿ ಜೂನ್ 19 ರ ಬೆಳಿಗ್ಗೆ 10 ರಿಂದ ಸಂಜೆ 4.30 ರವರೆಗೆ ಹಾಗೂ ಕೆಐಎಡಿಬಿ ಉಪ ವಿಭಾಗದ ಕಿತ್ತಾನೆ ಎನ್.ಜೆ.ವೈ ಮತ್ತು ಮಾದಪುರ ಫೀಡರ್‌ನ ಸುತ್ತಮುತ್ತಲಿನ ಗ್ರಾಮಗಳಲ್ಲಿ ಜೂನ್ 20 ರ ಬೆಳಿಗ್ಗೆ 10 ರಿಂದ ಸಂಜೆ 4.30 ರ ವರೆಗೆ ವಿದ್ಯುತ್ ವ್ಯತ್ಯಯ ವಾಗಲಿದೆ ಎಂದು ಹಾಸನ ಚಾ.ವಿ. ಸ.ನಿ.ನಿ.ಯ ಕಾರ್ಯ ಮತ್ತು ಪಾಲನಾ ವಿಭಾಗದ ಕಾರ್ಯಪಾಲಕ ಇಂಜಿನಿ ಯರ್ ತಿಳಿಸಿದ್ದಾರೆ.

ಜನ ಸಂಪರ್ಕ ಸಭೆ

ಹಾಸನ: ಚಾ.ವಿ.ಸ.ನಿ.ನಿ.ಯ ವತಿಯಿಂದ ಜೂನ್ 22 ರಂದು ಬೆಳಗ್ಗೆ 11 ಗಂಟೆಗೆ ಅರಸೀಕೆರೆ ಉಪ ವಿಭಾಗ ಕಚೇರಿಯ ಆವರಣದಲ್ಲಿ ಅಧೀಕ್ಷಕ ಇಂಜಿನಿ ಯರ್ ಅವರ ಅಧ್ಯಕ್ಷತೆಯಲ್ಲಿ ಜನ ಸಂಪರ್ಕ ಸಭೆ ಏರ್ಪಡಿಸಲಾಗಿದೆ ಎಂದು ಅರಸೀಕೆರೆಯ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯ ನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

ಶಾಲಾ ಆವರಣಗಳಲ್ಲಿ ಗಿಡ ನೆಡುವ ಕೆಲಸಕ್ಕೆ ಮುಂದಾಗಿ

ವಿಶ್ವ ಪರಿಸರ ದಿನದ ಅಂಗವಾಗಿ ಗಿಡ ನೆಡುವ ಕಾರ್ಯಕ್ರಮ

ಬೇಲೂರು: ಪಟ್ಟಣದ ಯೂರೋ ಕಿಡ್ಸ್ ಶಾಲಾ ಆವರಣದಲ್ಲಿ ವಿಶ್ವಪರಿಸರ ದಿನಾಚರಣೆ ಅಂಗವಾಗಿ ಗ್ರೀನರಿ ಟ್ರಸ್ಟ್‌ನಿಂದ ಆಯೋಜಿಸಲಾಗಿದ್ದ ಗಿಡ ನೆಡುವ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳೊಂದಿಗೆ ಪುರಸಭೆ ಮಾಜಿ ಅಧ್ಯಕ್ಷ ಹಾಲಿ ಸದಸ್ಯ ಜಿ.ಶಾಂತಕುಮಾರ್ ಚಾಲನೆ ನೀಡಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗಿಡನೆಡುವ ಮೂಲಕ ಚಾಲನೆ ನೀಡಿ ಮಾತನಾಡಿದ ಪುರಸಭೆ ಮಾಜಿ ಅಧ್ಯಕ್ಷ ಹಾಲಿ ಸದಸ್ಯ ಜಿ.ಶಾಂತಕುಮಾರ್, ಶಾಲೆಗಳ ಆವರಣದಲ್ಲಿ ಗಿಡಗಳನ್ನು ನೆಡುವುದರಿಂದ ಸುಂದರ ಪರಿಸರ ನಿರ್ಮಾಣವಾಗುವುದಲ್ಲದೆ, ಉತ್ತಮ ಆರೋಗ್ಯಕರವಾದ ಆಮ್ಲಜನಕವನ್ನು ಪಡೆಯಲು ಸಹಕಾರಿಯಾಗುತ್ತದೆ. ಶಾಲಾ ಕಾಲೇಜುಗಳ ಆವರಣದಲ್ಲಿ ಹಾಗೂ ಇನ್ನಿತರೆ ಪ್ರದೇಶಗಳಲ್ಲಿ ಶಾಲಾ ಮಕ್ಕಳಿಂದಲೇ ಹೆಚ್ಚು ಗಿಡಗಳನ್ನು ನೆಡುವ ಕೆಲಸಕ್ಕೆ ಮುಂದಾಗಬೇಕು. ಕಾರಣ ಇಂತಹ ಕಾರ್ಯಕ್ರಮಗಳಲ್ಲಿ ಭಾಗ ವಹಿಸುವ ಮಕ್ಕಳ ಮನಸ್ಸಿನ ಮೇಲೆ ಪರಿಸರವನ್ನು ಉಳಿಸಿ ಬೆಳೆಸುವ ಅರಿವು ಮೂಡಿಸಲು ಅನುಕೂಲವಾಗುತ್ತದೆ. ಮಕ್ಕಳು ಸಹ ತಮ್ಮ ಮನೆ ಹಾಗೂ ಜಮೀನುಗಳ ಆವರಣಗಳಲ್ಲಿ ಎಲ್ಲಿ ಜಾಗವಿರುತ್ತದೊ ಅಲ್ಲೆಲ್ಲ ಒಂದೊಂದು ಗಿಡಗಳನ್ನು ನೆಡುವ ಮೂಲಕ ನಮಗೆ ಬೇಕಾದ ಪರಿಸರವನ್ನು ಉಳಿಸಿ ಬೆಳೆಸುವುದಕ್ಕೆ ಮುಂದಾಗಬೇಕು ಎಂದರು.

ಗ್ರೀನರಿ ಟ್ರಸ್ಟ್ ಅಧ್ಯಕ್ಷ ಗಿರೀಶ್, ಜಗತ್ತಿನಲ್ಲಿ ಜನರು ಬದುಕಲು ಇರುವುದೊಂದೆ ಭೂಮಿ. ಈ ಭೂಮಿ ಯನ್ನು ಉಳಿಸುವುದಕ್ಕೆ ಪ್ರತಿಯೊಬ್ಬರು ಶ್ರಮಿಸಬೇಕು. ನಮ್ಮ ಹಿರಿಯರು ಪರಿಸರವನ್ನು ಪೂಜಿಸಿ ಉಳಿಸಿದ್ದರಿಂದ ನಾವುಗಳು ಇನ್ನೂ ಉಸಿರಾಡುತಿದ್ದೇವೆ. ಆದ್ದರಿಂದ ಭೂಮಿ ಮೇಲಿರುವ ಎಲ್ಲರು ನಮ್ಮ ಕೈಲಾದಷ್ಟು ಪರಿಸರವನ್ನು ಉಳಿಸಿ ಬೆಳೆಸಿ ನಮ್ಮಲ್ಲಿ ಉತ್ತಮ ವಾತಾವರಣವನ್ನು ನಿರ್ಮಿಸುವುದಕ್ಕೆ ಮುಂದಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಯೂರೋಕಿಡ್ಸ್ ಸಂಸ್ಥೆಯ ವ್ಯವಸ್ಥಾಪಕ ರಂಗನಾಥ್, ಗ್ರೀನರಿ ಟ್ರಸ್‌ನ ಪ್ರಶಾಂತ್, ಪರಮೇಶ್, ರಿಜ್ವಾನ್, ನಾಗರಾಜು, ಚಂದ್ರಯ್ಯ, ಅರಣ್ಯ ಇಲಾಖೆಯ ಸುಬಾಷ್, ಹಾಗೂ ಜ್ಞಾನ ವಿಜ್ಞಾನ ಸಂಸ್ಥೆಯ ಸೌಭಾಗ್ಯ, ಆಂತೋಣಿಸ್ವಾಮಿ ಸೇರಿದಂತೆ ಇನ್ನಿತರರು ಇದ್ದರು.

ಯುವಶಕ್ತಿ ಸಮರ್ಪಕ ಬಳಕೆ ಅಗತ್ಯ

ಅರಸೀಕೆರೆ: ಸರ್ಕಾರಿ ಶಾಲೆಗಳ ಬಗ್ಗೆ ಗ್ರಾಮೀಣ ಪ್ರದೇಶದಲ್ಲಿ ಕೆಟ್ಟ ಭಾವನೆ ಇದೆ. ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವುದಕ್ಕೆ ಇದೇ ಕಾರಣ. ಇದಕ್ಕೆ ನಾವೇ ಹೊಣೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಪಿ. ನಟರಾಜ್ ಅಭಿಪ್ರಾಯಪಟ್ಟರು.

ಸ್ಕೌಟ್ಸ್ ಅಂಡ್ ಗೈಡ್ಸ್ ತಾಲ್ಲೂಕು ಸಮಿತಿ ಹಮ್ಮಿಕೊಂಡಿದ್ದ ಸಮಾವೇಶ ಹಾಗೂ ಸಸಿ ನೆಡುವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಕ್ಷಕರ ಮತ್ತು ಸ್ಕೌಟ್ಸ್ ಅಂಡ್ ಗೈಡ್ಸ್ ಹಾಗೂ ಶಿಕ್ಷಕರ ಸಂಘದ ಕಾರ್ಯಕಾರಿ ಸಭೆಗಳನ್ನು ಶಾಲಾ ಅವಧಿಯ ನಂತರ ನಡೆಸಬೇಕು. ಸಭೆಗೆ ತರಗತಿ ಸಮಯವನ್ನು ಹಾಳು ಮಾಡುವುದು ಬೇಡ. ಸಂಘಟನೆ ಎಂದರೆ ಸಾಮಾಜಿಕ ಕಾರ್ಯಕ್ಕೆ ತಮ್ಮನ್ನು ತೊಡಗಿಸಿಕೊಳ್ಳುವುದು. ಇದಕ್ಕಾಗಿ ಶಾಲಾ ಅವಧಿಯ ನಂತರದ ಒಂದು ಗಂಟೆಯನ್ನು ಮೀಸಲಿಡಲಾಗದೇ? ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಪಿ. ನಟರಾಜ್ ಶಿಕ್ಷಕರನ್ನು ಪ್ರಶ್ನಿಸಿದರು.

ಸ್ಕೌಟ್ ಅಂಡ್ ಗೈಡ್ಸ್ ತರಬೇತಿ ಪಡೆದ ಸುಮಾರು 80 ಶಿಕ್ಷಕರು ತಾಲ್ಲೂಕಿನಲ್ಲಿದ್ದಾರೆ. ಈ ಸಮಾವೇಶಕ್ಕೆ ಪಾಲ್ಗೊಳ್ಳಲು ಅನ್ಯಕಾರ್ಯನಿಮಿತ್ತ ಆದೇಶವನ್ನು ನೀಡಿದ್ದೇನೆ. ಆದರೂ ಸಹ ಅನೇಕರು ಬಂದಿಲ್ಲವೆಂದರೆ ಹೇಗೆ ಇವರುಗಳಿಗೆ ತರಬೇತಿಗೆ 7 ದಿನಗಳ ವೇತನ ಮತ್ತು ಭತ್ಯೆ ನೀಡಲಾಗಿದೆ. ಸರ್ಕಾರದ ಹಣ ವ್ಯಯ ಮಾಡಿದ ಮೇಲೆ ಇವರು ಆ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗಬೇಕು. ಆಯಾ ಶಾಲೆಗಳಲ್ಲಿ ಘಟಕಗಳನ್ನು ತೆರೆದು ವಿದ್ಯಾರ್ಥಿಗಳಿಗೆ ಮೌಲ್ಯ, ಶಿಸ್ತನ್ನು ಮೈಗೂಡಿಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕು ಎಂದ ಅವರು, ಹಣವಿಲ್ಲದೆ ಸಾಮಾಜಿಕ ಕಾರ್ಯಕ್ರಮಗಳನ್ನು ಆಯೋಜಿಸಲು ಸಾಕಷ್ಟು ಅವಕಾಶಗಳಿವೆ, ಆ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿ ನನ್ನ ಸಹಕಾರವಿರುತ್ತದೆ ಎಂದರು.

ಸಂಸ್ಥೆಯ ಜಿಲ್ಲಾ ಆಯುಕ್ತ ಪ್ರಕಾಶ್ ಯಾಜಿ ಇದೇ ತಿಂಗಳ 22 ರಂದು ಜಿಲ್ಲಾ ಸಮಾವೇಶ ಹಮ್ಮಿಕೊಂಡಿದ್ದೇವೆ, ಅದಕ್ಕೆ ಎಲ್ಲರೂ ಆಗಮಿಸಬೇಕು. ತಾಲ್ಲೂಕು ಮಟ್ಟದ ಸಮಾವೇಶವನ್ನು ನೀವು ನಡೆಸಬೇಕಿದೆ. ಸಂಸ್ಥೆಯ ಮಾರ್ಗ ಸೂಚಿಯಂತೆ ಅಷ್ಟೇ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ಮಾಡಿದರೆ ಸಾಕು. ವಿದ್ಯಾರ್ಥಿಗಳಲ್ಲಿ ನಾಯಕತ್ವಗುಣ ಮತ್ತು ಶಿಸ್ತನ್ನು ಕಲಿಸುವ ಜವಾಬ್ದಾರಿ ನಿಮ್ಮ ಮೇಲಿದೆ. ಪ್ರಧಾನಿ ಮೋದಿಯವರ ಆಶಯದಂತೆ ನಮ್ಮಲ್ಲಿರುವ ಶೇ30 ರಷ್ಟು ಯುವಶಕ್ತಿಯನ್ನು ನಾವು ಸಮರ್ಪಕವಾಗಿ ಬಳಸಿಕೊಳ್ಳುವತ್ತ ಆಸಕ್ತಿ ತೋರಬೇಕಿದೆ ಎಂದ ಅವರು, ಕೆಲ ಶಾಲೆಗಳಲ್ಲಿ ಸಂಸ್ಥೆಯ ಸಮವಸ್ತ್ರ ಹೊಲಿಸಿ ಕೊಳ್ಳಲಾಗದ ವಿದ್ಯಾರ್ಥಿಗಳಿಗೆ ನಾವು ಸಮವಸ್ತ್ರವನ್ನು ತಾವು ಒದಗಿಸುವ ಭರವಸೆ ನೀಡಿದರು.

ಅರಸೀಕೆರೆ ತಾಲ್ಲೋಕು ಸಮಿತಿಯ ಕಾರ್ಯದರ್ಶಿ ಸುರೇಶ್ ತಮ್ಮ ಅವಧಿಯಲ್ಲಿ ಉತ್ತಮ ಕಾರ್ಯಗಳನ್ನು ಮಾಡುವ ಉತ್ಸಾಹದಲ್ಲಿ ಸಮಿತಿ ಇದೆ. ಇದಕ್ಕೆ ಶಿಕ್ಷಕರ ಸಹಕಾರ ಅಗತ್ಯ. ಅಂತೆಯೇ ಸಭೆಗೆ ಹಾಜ ರಾಗುವ ಮೂಲಕ ಉತ್ತೇಜಿಸ ಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ತರಬೇತಿ ಸಂಪನ್ಮೂಲ ವ್ಯಕ್ತಿ ಪ್ರಕಾಶ್, ಖಜಾಂಚಿ ಸಿದ್ದೇಶ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಜಯರಾಂ, ಕಾರ್ಯದರ್ಶಿ ಸದಾನಂದ ಮೂರ್ತಿ, ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ಕುಮಾರ್, ನಿರ್ದೇಶಕ ಶೇಖರ್, ಶಿಕ್ಷಣ ಸಂಯೋಜಕಿ ಶಶಿಕಲಾ, ಸಿ.ಆರ್.ಪಿ ರಾಧಾಮಣಿ, ಸಂಪನ್ಮೂಲ ವ್ಯಕ್ತಿ ಕಾಮೇಶ್ವರಿ ಭಟ್ ಉಪಸ್ಥಿತರಿದ್ದರು. ಸಂಪನ್ಮೂಲವ್ಯಕ್ತಿ ಕಾತ್ಯಾಯಿನಿ ಕಾರ್ಯಕ್ರಮ ನಡೆಸಿಕೊಟ್ಟರು.

ಹೆಸರು ಬದಲಾವಣೆ

ಹಾಸನ ಜಿಲ್ಲೆ, ಹಾಸನ ನಗರ, ಇಲಾಹಿನಗರ, ವಾರ್ಡ್ ನಂ.18ರಲ್ಲಿ ವಾಸವಾಗಿರುವ **ಶೇಕ್‌ಸತ್ತರ್**ರವರ ಮಗ **ಶೇಕ್ ಆದಿಲ್**ಸುಮಾರು 35 ವರ್ಷ ಆದ ನಾನು ಹೇಳುವುದೇನೆಂದರೆ **ಆದಿಲ್ ಪಾಷ ಬಿನ್ ಸತ್ತರ್‌ಸಾಬ್** ಎಂಬ ಹೆಸರನ್ನು ಬದಲಾಯಿಸಿ **ಶೇಕ್ ಆದಿಲ್ ಬಿನ್ ಶೇಕ್ ಸತ್ತರ್** ಎಂದು ದಿ:13-06-2017 ರಂದು ಹಾಸನದ ನೋಟರಿ ಎ.ಎಮ್. ಸುರೇಶ್‌ರವರ ಸಮ್ಮುಖದಲ್ಲಿ ದೃಢೀಕರಿಸಿರುತ್ತೇನೆ. ಮುಂದಿನ ಎಲ್ಲಾ ವ್ಯವ ಹಾರಗಳು **ಶೇಕ್ ಆದಿಲ್** ಎಂಬ ಹೆಸರಿನಲ್ಲಿ ನಡೆಸಿಕೊಂಡು ಹೋಗುತ್ತೇನೆ.

ಸಹಿ/-**ಶೇಕ್ ಆದಿಲ್**

ಡಾಂಬರ್ ರಸ್ತೆಗೆ ಆಗ್ರಹ

ರಾಮನಾಥಪುರ: ಸ್ಥಳೀಯ ಗ್ರಾಮ ಪಂಚಾಯಿತಿ ಅಧಿಕಾರಿಗಳ ಬೇಜವಾಬ್ದಾರಿ ಹಾಗೂ ನಿರ್ಲಕ್ಷ್ಯದಿಂದ ಹತ್ತಾರು ವರ್ಷಗಳಿಂದ ಇಲ್ಲಿಯ ರಸ್ತೆಗೆ ಮೆಟ್ಲಿಂಗ್ ಡಾಂಬರೀಕರಣ ಹಾಗೂ ಚರಂಡಿ ವ್ಯವಸ್ಥೆ ಮಾಡಿಲ್ಲ ಎಂದು ಕೋಟವಾಳು ಗ್ರಾಮದ ನಿರ್ವಹಕ ಶಿವಣ್ಣ ದೂರಿದ್ದಾರೆ.

ರಾಮನಾಥಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೋಟವಾಳು ಗ್ರಾಮದ ಬಸವರಾಜು ಅವರ ಮನೆಯ ಮುಖ್ಯ ರಸ್ತೆಯಿಂದ ರಾಜಪ್ಪನವರ ಮನೆಯ ವರೆವಿಗೆ ಸುಮಾರು 500 ಮೀ. ದೂರ ರಸ್ತೆ ಹಾಗೂ ಚರಂಡಿ ಇಲ್ಲದೇ ಅವ್ಯವಸ್ಥೆ ಯಿಂದ ಕೂಡಿದೆ. ಇದರಿಂದ ಇಲ್ಲಿಯ ಸಾರ್ವಜನಿಕರು, ದ್ವಿಚಕ್ರ ವಾಹನಗಳು, ಎತ್ತಿನಗಾಡಿಗಳು ಸಂಚರಿಸಲು ಬಹಳ ಅನಾನೂಕುಲವಾಗಿದೆ ಗ್ರಾಮಸ್ಥರು ದೂರಿದ್ದಾರೆ. ಆದ್ದರಿಂದ ಕೋಟವಾಳು ಗ್ರಾಮದ ಬಸವರಾಜು ಅವರ ಮನೆಯ ಹತ್ತಿರದಿಂದ ಕೊನೆಯ ಭಾಗದ ರಾಜಪ್ಪನವರ ಮನೆಯವರೆವಿಗೆ ಡಾಂಬರ್‌ರಸ್ತೆ ಹಾಗೂ ಚರಂಡಿ ವ್ಯವಸ್ಥೆ ಮಾಡುವಂತೆ ನಿರ್ವಾಹಕ ಶಿವಣ್ಣ ಹಾಗು ಗ್ರಾಮಸ್ಥರು ಆಗ್ರಹಿಸಿದ್ದಾರೆ.

'ಮಹಿಳೆಯರು ಸ್ವಯಂ ಉದ್ಯೋಗ ಸೃಷ್ಟಿಸಿಕೊಳ್ಳಿ'

ಹೊಳೆನರಸೀಪುರ : ಸಮಾಜದಲ್ಲಿ ಶೋಷಣೆಗೆ ಒಳಗಾಗಿರುವ ಬಡಮಕ್ಕಳು ವಿಧವೆಯರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡುವ ಸತ್ಕಾರ್ಯವನ್ನು ಮಾಡಲು ಸಕಲ ನಾಗರಿಕರು ಮುಂದಾಗಬೇಕು ಎಂದು ಕರ್ನಾಟಕ ಆಶೀರ್ವಾದ ಮಂಡಳಿ ಅಧ್ಯಕ್ಷ ಸುಬ್ಬೇಗೌಡ ತಿಳಿಸಿದರು.

ಪಟ್ಟಣದ ರೆಹೋಬೋತ್ ಚಾರಿಟೆಬಲ್ ಟ್ರಸ್ಟ್‌ಮತ್ತು ಕರ್ನಾಟಕ ಆಶೀರ್ವಾದ ಮಂಡಲಿ ಸಹಯೋಗದೊಂದಿಗೆ ರೆಹೋಬೊತ್ ಚರ್ಚ್ ಸಭಾಂಗಣದಲ್ಲಿ ಆಯೋಜಿಸಿದ್ದ ಬಡವರಿಗೆ ವಿಧವೆಯರಿಗೆ ಮತ್ತು ಉಚಿತವಾಗಿ ಉಡುಗೊರೆ ವಿದ್ಯಾಭ್ಯಾಸ ಮಾಡುತ್ತಿರುವ ಬಡ ಮಕ್ಕಳಿಗೆ ಉಚಿತ ನೋಟ್ ಪುಸ್ತಕ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಮಾಜದಲ್ಲಿ ನೆಲೆ ಇಲ್ಲದ ಮತ್ತು ಪೋಷಕರಿಲ್ಲದ ಮಕ್ಕಳಿಗೆ ಮತ್ತು ವಿಧವೆಯರಿಗೆ ವಿಶೇಷವಾಗಿ ಹಲವು ತರಬೇತಿಗಳನ್ನು ನೀಡಿ ಸ್ವಯಂ ಉದ್ಯೋಗ ಸೃಷ್ಟಿಸಿಕೊಳ್ಳಲು ಆರ್ಥಿಕ ನೆರವು ನೀಡಲಾಗುವುದು. ಈ ಉದ್ದೇಶದಿಂದ ನಮ್ಮ ಮಂಡಳಿಯಿಂದ ಇಂತಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ವಿಧವೆಯರು ಜೀವನ ರೂಪಿಸಿಕೊಳ್ಳುವ ನಿಟ್ಟಿನಲ್ಲಿ ಹೊಲಿಗೆ ಉಚಿತ ತರಬೇತಿ, ಆರೋಗ್ಯ ತಪಾಸಣೆ ಹಾಗೂ ಬಡ ವಿದ್ಯಾರ್ಥಿಗಳಿಗೆ, ಪೋಷಕರಿಲ್ಲದ ಅನಾಥ ಮಕ್ಕಳಿಗೆ ಆಶ್ರಯನೀಡಿ ಅವರ ವಿದ್ಯಾಭ್ಯಾಸ ಮಾಡುವ ಶಾಲಾ ಕಾಲೇಜಿಗೆ ಉಚಿತವಾಗಿ ಶಾಲಾ ಶುಲ್ಕ ಮತ್ತು ವ್ಯಾಸಂಗಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸಲಾಗುತ್ತಿದೆ.

ಗ್ರಾಮೀಣ ಪ್ರದೇಶದಲ್ಲಿ ಸುಮಾರು 20 ವರ್ಷಗಳಿಂದ ನೀಡುತ್ತಾ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು 3000 ವಿಧವೆಯರಿಗೆ ಆರ್ಥಿಕವಾಗಿ ಸಬಲರಾಗು ವಂತೆ ಉತ್ತೇಜನ ನೀಡಲಾಗಿದೆ. 5000 ಶಾಲಾ ಮಕ್ಕಳಿಗೆ ಉಚಿತ ನೋಟ್ ಪುಸ್ತಕ ಹಾಗೂ ಓದುವ ಸಲಕರಣೆಗಳನ್ನು ವಿತರಿಸಲಾಗಿದೆ ಎಂದು ತಿಳಿಸಿದರು.

ಸಮಾಜದಲ್ಲಿ ಮಹಿಳೆಯರು ಸೋಮಾರಿಗಳಾಗದೇ ಸ್ವಯಂ ಉದ್ಯೋಗ ಸೃಷ್ಟಿಸಿಕೊಂಡು ಯಾರ ಹಂಗಿ ಲ್ಲದೆ ಆರ್ಥಿಕವಾಗಿ ಸದೃಢರಾಗಬೇಕು ಎಂದು ಸಮಾಜ ಸೇವಕಿ ಪದ್ಮ ಸುಬ್ಬೇಗೌಡ ತಿಳಿಸಿದರು.

ಕುಟುಂಬದಲ್ಲಿ ಪುರುಷರು ಮದ್ಯಪಾನ ಮಾಡಿ ಮಹಿಳೆಯರ ಮೇಲೆ ದೌರ್ಜನ್ಯ ಎಸಗಿ ಸಂಸಾರದಲ್ಲಿ ಬಿರುಕುಂಟಾಗಿರುವ ಅದೆಷ್ಟೋ ಕುಟುಂಬಗಳು ಬೀದಿಪಾಲಾಗಿವೆ. ಆದ್ದರಿಂದ ಮಹಿಳೆ ಯರು ಸ್ವ- ಉದ್ಯೋಗದಲ್ಲಿ ತೊಡಗಿ ಕೊಂಡರೆ ಕುಟುಂಬಕ್ಕೆ ಆಸರೆಯಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ರೆಹೋ ಬೋತ್ ಚಾರಿಟೆಬಲ್ ಟ್ರಸ್ಟ್ ಪಾಸ್ಟರ್ ವಸಂತ್, ಸತೀಶ್ ಮತ್ತಿತರರು ಉಪಸ್ಥಿರಿದ್ದರು. ಇದೇ ಸಂದರ್ಭದಲ್ಲಿ ಸುಮಾರು 100 ವಿಧವೆಯರಿಗೆ ಸಮವಸ್ತ್ರ ಹಾಗೂ 50 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉಚಿತ ನೋಟ್ ಬುಕ್ ವಿತರಿಸಿದರು.

ರಂಗನಾಥಸ್ವಾಮಿ ದೇವಾಲಯದಲ್ಲಿ ಸಂಕಷ್ಟಹರ ಚತುರ್ಥಿ ಪೂಜೆ

ಕೊಣನೂರು: ಹೋಬಳಿಯ ಆದಿ ಚುಂಚನಗಿರಿ ಮಹಾ ಸಂಸ್ಥಾನ ಶಾಖಾ ಮಠದ ಆವರಣದಲ್ಲಿರುವ ಚಿಕ್ಕ ಬೊಮ್ಮನಹಳ್ಳಿ ರಂಗನಾಥಸ್ವಾಮಿ ದೇವಾಲಯದಲ್ಲಿ ಸಂಕಷ್ಟಹರ ಚತುರ್ಥಿಯ ಅಂಗವಾಗಿ ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗಿದವು.

ರೂ 3 ಕೋಟಿ ವೆಚ್ಚದಲ್ಲಿ ನಿರ್ಮಿಸಿದ ರಂಗನಾಥ ದೇವಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸುತ್ತಮುತ್ತಲ ಗ್ರಾಮಗಳ ನೂರಾರು ಭಕ್ತರು ಭಾಗವಹಿಸಿದ್ದರು. ಗಣಪತಿ ವಿಗ್ರಹಕ್ಕೆ ಪಂಚಾಮೃತ ಅಭಿಷೇಕ, ಅರ್ಚನೆ, ಮಹಾಮಂಗಳಾರತಿ ಹಾಗೂ ಪ್ರಸಾದ ವಿನಿಯೋಗ ನೆರವೇರಿಸಲಾಯಿತು. ದೇಗುಲದಲ್ಲಿರುವ ಲಕ್ಷ್ಮಿ ಆಂಜನೇಯ, ರಂಗನಾಥ ದೇವರ ವಿಗ್ರಹಗಳಿಗೆ ಹೂವಿನ ಅಲಂಕಾರ ಮಾಡಲಗಿತ್ತು. ಸಂಕಷ್ಟಹರ ಚತುರ್ಥಿಯ ಅಂಗವಾಗಿ ಗಣಪತಿ ವಿಗ್ರಹಕ್ಕೆ ಮಾಡಿದ್ದ ವಿಶೇಷ ಬೆಣ್ಣೆ ಅಲಂಕಾರ ಭಕ್ತಾಧಿಗಳ ಗಮನ ಸೆಳೆಯಿತು.

ಸಾರ್ವಜನಿಕ ಪ್ರಕಟಣೆ

ಹಾಸನದ ಕೆ.ಆರ್. ಪುರಂ ಬಡಾವಣೆಯಲ್ಲಿ ವಾಸವಾಗಿರುವ ಲೇಟ್ ಡಿ.ಆರ್.ಕೃಷ್ಣ ಸ್ವಾಮಿ ಇವರ ಮಗ ಎಸ್.ಕೆ. ವಿಜಯಕುಮಾರ್ ರವರು ಈ ಕೆಳಗೆ ಕಾಣಿಸಿದ ಷೆಡ್ಯೂಲ್ ಸ್ವತ್ತಿನ ಹಕ್ಕುದಾರಿ ಮಾಲೀಕರಾಗಿರುತ್ತಾರೆ. ಈ ಆಸ್ತಿಗೆ ಸಂಬಂಧಿಸಿದಂತೆ ಹಾಸನದ ರಿಂಗ್ ರಸ್ತೆಯ ಹತ್ತಿರ ಭಗತ್‌ಸಿಂಗ್ ರಸ್ತೆ 3ನೇ ಕ್ರಾಸ್‌ನಲ್ಲಿರುವ ಶ್ರೀಮತಿ ಹೆಲೆನ್ ವಿಕ್ಟೋರಿಯ ಮೆನಿಜೆಯಿಸ್ ಇವರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಮೋಸದ ಕೆಲವು ದಾಖಲಾತಿಗಳನ್ನು ಸೃಷ್ಟಿಸಿಕೊಂಡು ನನ್ನ ಹಕ್ಕು ಮತ್ತು ಸ್ವಾಧೀನಕ್ಕೆ ದಕ್ಕೆ ಉಂಟು ಮಾಡಿದ್ದರಿಂದ ನಾನು ಹಾಸನದ 6ನೇ ಅಧಿಕ ಸಿವಿಲ್ ಜಡ್ಜ್ ಕಿ.ವಿ.) ರವರ ನ್ಯಾಯಾಲಯದಲ್ಲಿ ಅ.ದಾ.ಸಂಖ್ಯೆ 27/2017 ರಂತೆ ದಾವೆ ಸಲ್ಲಿಸಿ ಶಾಶ್ವತ ನಿರ್ಬಂದಕಾಜ್ಞೆ ಹಾಗೂ ಹೆಲೆನ್ ವಿಕ್ಟೋರಿಯಾ ಮೆನಿಜೆಯಸ್ ಪರವಾಗಿರುವ ದಾಖಲಾತಿಗಳು ಮೋಸದಿಂದ ಕೂಡಿರುತ್ತವೆಂದು ಹಾಗೂ ದಾವಾ ಷೆಡ್ಯೂಲ್ ಸ್ವತ್ತಿನ ಮೇಲೆ ಅವರಿಗೆ ಹಕ್ಕಿಲ್ಲವೆಂದು ಪರಿಹಾರ ಕೇಳಿರುತ್ತೇನೆ. ಹಾಗೂ ನಿರ್ಬಂದಕಾಜ್ಞೆ ಆದೇಶ ಪಡೆದಿರುತ್ತೇನೆ. ಈ ಹಂತದಲ್ಲಿ ಎದುರುದಾರರಾದ ಹೆಲನ್ ವಿಕ್ಟೋರಿಯ ಮೆನಿಜೆಯಸ್ ಇವರು ದಾವಾ ನಡವಳಿಕೆಯಲ್ಲಿರುವಾಗ ಬೇರೆಯವರಿಗೆ ಮಾರಾಟ ಮಾಡುವ ಪ್ರಯತ್ನದಲ್ಲಿರುತ್ತಾರೆಂದು ತಿಳಿದು ಬಂದಿರುತ್ತದೆ. ದಾವಾ ನಡವಳಿಕೆಯಲ್ಲಿರುವ ಹಂತದಲ್ಲಿ ಯಾವುದೇ ಸಾರ್ವಜನಿಕರು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಬಾಡಿಗೆ ಕರಾರು ಕ್ರಯ ಹಾಗೂ ಇತರೆ ವ್ಯವಹಾರಗಳನ್ನು ಮಾಡಿದರೆ ಸದರಿ ದಾಖಲಾತಿಗಳು ಊರ್ಜಿತವಾಗತಕ್ಕದ್ದಲ್ಲ. ಹಾಗೂ ಷೆಡ್ಯೂಲ್ ಸ್ವತ್ತಿನ ಮೇಲೆ ನನಗಿರುವ ಹಕ್ಕನ್ನು ಬದ್ಧಪಡಿಸುವುದಿಲ್ಲ ಎಂದು ತಿಳಿಯುವುದು.

ಅನುಸೂಚಿ ವಿವರ

ಹಾಸನ ಕುವೆಂಪುನಗರ ಬಡಾವಣೆ, 4ನೇ ಎ ಮೈನ್ ಸೈಟ್ ನಂ.19, ಎಸ್.ಎ.ಎಸ್ ನಂ.670., ಪೂ-ಪ-45 ಅಡಿ, ಉ-ದ 60 ಅಡಿ ವಿಸ್ತೀರ್ಣವುಳ್ಳ ಸ್ವತ್ತಿಗೆ ಚೆಕ್ಕುಬಂದಿ:-

ಪೂರ್ವಕ್ಕೆ: ಮೈನ್ ರಸ್ತೆ, ಪಶ್ಚಿಮಕ್ಕೆ :ನಿವೇಶನ ನಂ.20, ಉತ್ತರಕ್ಕೆ :ನಿವೇಶನ ನಂ.38, ದಕ್ಷಿಣಕ್ಕೆ :ರಸ್ತೆ, ಈ ಮಧ್ಯೆ ಇರುವ ಸ್ವತ್ತು,

/-ಸಹಿ
ಎಸ್.ಕೆ.ವಿಜಯಕುಮಾರ್

ಖಾಲಿ ನಿವೇಶನ ಒತ್ತುವರಿ: ಪುರಸಭೆ ಸದಸ್ಯರ ಆರೋಪ

ಹೊಳೆನರಸೀಪುರ : ಪಟ್ಟಣದ ರಿಸರ್ವ್ ಬ್ಯಾಂಕ್ ರಸ್ತೆಯ ಸಮೀಪದ ಹೊಳೆ ಬೀದಿಯಲ್ಲಿರುವ ಅಯ್ಯಪ್ಪ ಸ್ವಾಮಿ ದೇವಸ್ಥಾನ ಮುಂಭಾಗದ ಹೊಳೆಯ ದಡದಲ್ಲಿ ಸಾವಿರಾರು ವರ್ಷಗಳ ಹಿಂದೆ ನಿರ್ಮಿಸಿದ್ದ ಹಳೆಯ ಮಂಟಪವೊಂದರ ಪಕ್ಕದಲ್ಲಿ ಪುರಸಭೆ ವ್ಯಾಪ್ತಿಗೆ ಒಳಪಟ್ಟ ಖಾಲಿ ನಿವೇಶನದ ಖಾತೆ.ನಂ. 217 ರಲ್ಲಿ ಪೂರ್ವ ಪಶ್ಚಿಮ 23 ಅಡಿ ಅಗಲ , ದಕ್ಷಿಣೋತ್ತರ 45 ಅಡಿ ವಿಸ್ತೀರ್ಣವುಳ್ಳ ನಿವೇಶನವನ್ನು ಖಾದಿ ಬೋರ್ಡ್ ಮಂಡಳಿಯವರು ಅಕ್ರಮವಾಗಿ ಒತ್ತುವರಿ ಮಾಡಿ ಬೇಲಿ ಹಾಕಿದ್ದಾರೆ ಎಂದು ಪುರಸಭೆ ಸದಸ್ಯರು ಆರೋಪ ಮಾಡಿದ್ದಾರೆ.

ನಿವೇಶನದ ಒತ್ತುವರಿ ಕುರಿತು ಪುರಸಭಾ ಸದಸ್ಯರು ಮತ್ತು ನಾಗರಿಕರು ಪುರಸಭಾ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಕಛೇರಿಗೆ ಅರ್ಜಿ ಬಂದ ಹಿನ್ನೆಲೆಯಲ್ಲಿ ಪುರಸಭಾ ಅಧಿಕಾರಿಗಳು ಖಾದಿ ಬೋರ್ಡ್ ಅವರು ಅಕ್ರಮವಾಗಿ ನಿವೇಶನಕ್ಕೆ ಬೇಲಿ ಹಾಕಿಕೊಂಡಿದ್ದನ್ನು ಪುರಸಭೆ ಅಧಿಕಾರಿಗಳು ತೆರವುಗೊಳಿಸಿ ಜಾಗವನ್ನು ಸಮತಟ್ಟು ಮಾಡಿದ್ದರು. ಇತ್ತೀಚೆಗೆ ಆ ಸ್ಥಳದಲ್ಲಿ ಅಕ್ರಮವಾಗಿ ಅನಧಿಕೃತ ಕಟ್ಟಡ ತಲೆಯೆತ್ತುತ್ತಿದೆ ಎಂದು ಕಾಂಗ್ರೆಸ್ ಪಕ್ಷದ ಪುರಸಭಾ ಸದಸ್ಯರು ಆಕ್ರೋಶವ್ಯಕ್ತಪಡಿಸಿದ್ದಾರೆ.

ಅನಧಿಕೃತವಾಗಿ ನಿರ್ಮಿಸುತ್ತಿರುವ ಕಟ್ಟಡದ ಕೆಲಸ ನಿಲ್ಲಿಸುವಂತೆ ಈ ಹಿಂದೆ ಹೋರಾಟ ಮಾಡಿದ್ದರು ಎಂದು ಸಾರ್ವಜನಿಕರು ಹೇಳಿದರು. ಈ ವಿಚಾರವಾಗಿ ಸಾರ್ವಜನಿಕರು ವಿರೋಧವ್ಯಕ್ತಪಡಿಸಿ ಅಸಮಾಧಾನಗೊಂಡಿದ್ದರು. ಪುರಸಭಾ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಪಟ್ಟಣದಲ್ಲಿರುವ ಪುರಸಭೆ ನಿವೇಶನಗಳನ್ನು ಒಂದೊಂದಾಗಿ ಒತ್ತುವರಿಯಾಗುತ್ತಿರುವುದು ಪುರಸಭೆ ದುರಾಡಳಿತಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಹೊಳೆಯ ದಡದಲ್ಲಿರುವ ನಿವೇಶನದ ಜಾಗದಲ್ಲಿ ಕಟ್ಟಡ ನಿರ್ಮಿಸಿಕೊಳ್ಳಲು ವ್ಯಕ್ತಿ ಯೊಬ್ಬನಿಗೆ ಕೆಲವು ಮುಖಂಡರು ಸಹಾಯ ಮಾಡುತ್ತಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಸಾರ್ವಜನಿಕರು ಅನುಮಾನ ವ್ಯಕ್ತಪಡಿಸಿದ್ದಾರೆ. ಅಧಿಕಾರಿಗಳು ಪುರ ಸಭೆಯಲ್ಲಿ ಯಾವುದೇ ಕಾನೂನುಗಳನ್ನು ಅಳವಡಿಸಿಕೊಳ್ಳದೆ ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅಧಿಕಾರಿಗಳನ್ನು ಹೇಳುವವರು ಕೇಳುವವರು ಯಾರು ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರತಿಯೊಂದಕ್ಕೂ ಸಾರ್ವಕನಿಕರು ಯಾವುದೇ ದಾಖಲಾತಿಗಳನ್ನು ಪಡೆಯಲು ಕೈತುಂಬ ಲಂಚ ನೀಡಿದರೆ ದಾಖಲಾತಿ ಲಭ್ಯವಾಗುತ್ತವೆ.

ಇಲ್ಲದಿದ್ದಲ್ಲಿ ಕಛೇರಿಗೆ ಹತ್ತಾರು ಬಾರಿ ಅಲೆದಾಡಿಸಿ ನಾಗರಿಕರಿಗೆ ತೊಂದರೆ ನೀಡುವ ಪರಿಪಾಠ ಬೆಳೆಸಿಕೊಂಡಿದ್ದಾರೆ ಎಂದು ಬಿ,ಜೆ.ಪಿ ಯುವ ಮೋರ್ಚಾ ಅಧ್ಯಕ್ಷ ನಾಗೇಂದ್ರ ಹೇಳಿಕೆ ನೀಡಿದರಲ್ಲದೆ ಖಾದಿ ಬೋರ್ಡ್ ಮಂಡಳಿ ಅಕ್ರಮವಾಗಿ ಹಾಕಿಕೊಂಡಿದ್ದ ಬೇಲಿಯನ್ನು ತೆರವು ಗೊಳಿಸಿದ ಮೇಲೆ ಕಾನೂನಿನ ಪ್ರಕಾರ ಸಾರ್ವಜನಿಕವಾಗಿ ಹರಾಜು ಮಾಡಬೇಕಿತ್ತು. ಆದರೆ ಏಕಾಏಕಿ ಹರಾಜು ಮಾಡದೆ ಕಾನೂನು ಉಲ್ಲಂಘಿಸಿ ಕಟ್ಟಡ ನಿರ್ಮಿಸಲು ಪುರಸಭಾ ಅಧಿಕಾರಿಗಳು ಉತ್ತೇಜನ ನೀಡು ತ್ತಿರುವುದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅರಸೀಕೆರೆ ತಾಲ್ಲೂಕು ಸರ್ಕಾರಿ ಹಿರಿಯ ಮಾದರಿ ಪ್ರಾಥಮಿಕ ಶಾಲಾ ಗಾಂಧಿ ಮೈದಾನದಲ್ಲಿ ಸ್ಕೌಟ್ಸ್ ಅಂಡ್ ಗೈಡ್ಸ್ ಹಮ್ಮಿಕೊಂಡಿದ್ದ ಪರಿಸರ ದಿನ ಕಾರ್ಯಕ್ರಮದಲ್ಲಿ ನಗರಸಭೆ ಉಪಾಧ್ಯಕ್ಷ ಪಾರ್ಥಸಾರತಿ ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ವಿದ್ಯಾರ್ಥಿಗಳಲ್ಲಿ ಚಿಕ್ಕಂದಿನಿಂದಲೇ ಪರಿಸರದ ಮಹತ್ವವನ್ನು ತಿಳಿಸಿಕೊಡುವ ಜವಾಬ್ದಾರಿ ಶಿಕ್ಷಕ ಸಮೂಹದ ಮೇಲಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಜಿಲ್ಲಾ ಆಯುಕ್ತ ಪ್ರಕಾಶ್ ಯಾಜಿ, ಎ.ಡಿ.ಪಿ.ಗಳಾದ ಯೋಗೀಶಚಾರ್,ಇ.ಸಿ.ಒ.ಶಶಿಕಲಾ, ಸಿ.ಆರ್.ಪಿ.ರಾಧಾಮಣಿ, ಆರ್.ಪಿ.ಕಾಮೇಶ್ವರಿ ಭಟ್ ಮತ್ತು ಕಾತ್ಯಾಯಿನಿ ಪಾಲ್ಗೊಂಡಿದ್ದರು.

ಉಪನಿರ್ದೇಶಕರ ಕಛೇರಿ, ಫೋನ್ ನಂ.268960

ಸಮಾಜ ಕಲ್ಯಾಣ ಇಲಾಖೆ, ಹಾಸನ ಜಿಲ್ಲೆ, ಹಾಸನ.

ಸಂ/ಜಿಸಕಅ/ಡಿ3/ಸಿಬ್ಬಂದಿ/ಸಿಆರ್ 36/16-17 ದಿ:17-6-2017

ಪ್ರಕಟಣೆ

ಹಾಸನ ಜಿಲ್ಲೆ, ಸಮಾಜ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಅಡುಗೆ ಸಹಾಯಕರ ಮತ್ತು ರಾತ್ರಿ ಕಾವಲುಗಾರರ ಹುದ್ದೆಗಳನ್ನು ಭರ್ತಿ ಮಾಡಲು ದಿ:20-10-2016 ರ ಅಧಿಸೂಚನೆಯಂತೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಂತರ್ಜಾಲದ ಮೂಲಕ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಪೈಕಿ ಎಸ್.ಎಸ್.ಎಲ್.ಸಿಯಲ್ಲಿ ಪಡೆದ ಅಂಕಗಳ ಜೇಷ್ಠತೆ ಆಧಾರದ ಮೇಲೆ 1:5 ರ ಅನುಪಾತದಲ್ಲಿ ಅಡುಗೆ ಸಹಾಯಕರ ಹುದ್ದೆಗಳ ಅಭ್ಯರ್ಥಿಗಳ ದಾಖಲಾತಿಗಳ ಪರಿಶೀಲನೆಯನ್ನು ದಿನಾಂಕ:21-06-2017 ರಂದು ಬೆಳಿಗ್ಗೆ 10.00ಗಂಟೆಗೆ ಹಾಗೂ ರಾತ್ರಿ ಕಾವಲುಗಾರರ ಹುದ್ದೆಗೆ ಅಂತರ್ಜಾಲದ ಮೂಲಕ ಅರ್ಜಿ ಸಲ್ಲಿಸಿದ್ದ ಅಭ್ಯರ್ಥಿ ಪೈಕಿ 1:5 ರ ಅನುಪಾತದಲ್ಲಿ ರಾತ್ರಿ ಕಾವಲುಗಾರರ ಹುದ್ದೆಗಳ ಅಭ್ಯರ್ಥಿಗಳ ದಾಖಲಾತಿಗಳ ಪರಿಶೀಲನೆಯನ್ನು ದಿನಾಂಕ:24-06-2017 ರಂದು ಬೆಳಿಗ್ಗೆ 10.00 ಗಂಟೆ ಡಾ:ಬಿ.ಆರ್.ಅಂಬೇಡ್ಕರ್ ಭವನ, ಹರ್ಷಮಹಲ್ ರಸ್ತೆ, ಹಾಸನ. ಇಲ್ಲಿ ನಡೆಸಲಾಗುವುದು. ಅರ್ಹ ಅಭ್ಯರ್ಥಿಗಳು ಹಾಜರಾತಿ ಸೂಚನಾ ಪತ್ರವನ್ನು ಹಾಸನ ಜಿಲ್ಲಾಧಿಕಾರಿಗಳ ವೆಬ್‌ಸೈಟ್ ವಿಳಾಸ http://hassan.nic.in ನಿಂದ ಡೌನ್‌ಲೋಡ್ ಮಾಡಿಕೊಂಡು ಸೂಚನಾ ಪತ್ರದಲ್ಲಿ ಸೂಚಿಸಿರುವ ಮೂಲ ದಾಖಲಾತಿಗಳು ಹಾಗೂ 2 ಸೆಟ್ ಜೆರಾಕ್ಸ್ ಪ್ರತಿಗಳೊಂದಿಗೆ ಪರಿಶೀಲನೆಗೆ ಹಾಜರಾಗುವುದು.

ಸಹಿ/-
ಅಧ್ಯಕ್ಷರು,
ಸಮಾಜ ಕಲ್ಯಾಣ ಇಲಾಖೆ,
'ಡಿ' ವೃಂದದ ಹುದ್ದೆಗಳ ನೇರ ನೇಮಕಾತಿ ಪ್ರಾಧಿಕಾರ,
ಮತ್ತು ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ.